**CC 1313/2018**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 1313/2018

**ಸಿ ಡಬ್ಲ್ಯೂ** -9
**ಪಿ ಡಬ್ಲ್ಯೂ** -5

**ಸಾಕ್ಷಿಯ ಹೆಸರು** - **ಮುತಹಾರ್ ಹುಸೇನ್**
**ತಂದೆಯ ಹೆಸರು** - **ಮೌಲಾ ಹುಸೇನ್**
**ವಯಸ್ಸು** - 50 **ವರ್ಷಗಳು**
**ಉದ್ಯೋಗ** - **ಎಲೆಕ್ಟ್ರಿಷಿಯನ್**
**ವಾಸಸ್ಥಳ** - **ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ** 12-12-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಚಾಸಾ -1 ಮತ್ತು ಆರೋಪಿಯ ಮದುವೆಯನ್ನು ಹಿರಿಯಿರೆಲ್ಲ ನಿಂತು ಮಾಡಿದ್ದರು. ನಂತರ ಎನಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ಮದುವೆ ಕಾಲಕ್ಕೆ ಆರೋಪಿ ಚಾಸಾ -1 ರವರಿಂದ 10 ಗ್ರಾಂ ಬಂಗಾರ ಮತ್ತು ರೂ. 1,00,000/- ಬೆಲೆ ಬಾಳುವ ಮನೆ ಬಳಕೆ ಸಾಮಾನುಗಳನ್ನು ಹಾಗೂ ಮದುವೆಗೆ ರೂ. 3,00,000/- ಖರ್ಚು ಮಾಡಿಸಿದ್ದ ಅಂದರೆ ಸರಿಯಲ್ಲ. ಚಾಸಾ -1 ರವರು ಆರೋಪಿಯ ಮನೆಗೆ ಹೋದ ನಂತರ ಹೆಚ್ಚಿನ ವರದಕ್ಷಿಣೆ ಸಲುವಾಗಿ ಪದೇ

ಪದೇ ತವರು ಮನೆಂದ ಹಣ ತರುವಂತೆ ಪೀಡಿಸುತ್ತಿದ್ದ ಅಂದರೆ ಸರಿಯಲ್ಲ. ಆರೋಪಿ ಚಾಸಾ -1 ರವರ 9 ತೊಲೆ ಬಂಗಾರವನ್ನು ತನ್ನ ಸ್ವಂತಕ್ಕೆ ಉಪಯೋಗಿಸಿಕೊಳ್ಳಲು ಅಡ ಇಟ್ಟು ಬಿಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಈ ಬಗ್ಗೆ ಚಾಸಾ -1 ರವರ ತಂದೆ ತಾಯಿ ಈ ಬಗ್ಗೆ ನನಗೆ ತಿಳಿಸಿದ್ದರು ಅಂದರೆ ಸರಿಯಲ್ಲ. ಚಾಸಾ -1 ರವರು ಕಿರುಕುಳ ತಾಳದೇ ಹೊಸಪೇಟೆ ಬಂದಾಗ ನಾನು ಮತ್ತ ಇತರೆ ಸಾಕ್ಷಿದಾರರು ಪಂಚಾಯಿತಿ ಮಾಡಿಸಿ ಕಳುಹಿಸಿಕೊಟ್ಟಿದ್ದೇವು ಅಂದರೆ ಸರಿಯಲ್ಲ. ನಂತರ ನವೆಂಬರ್ 2016 ರಲ್ಲಿ ಚಾಸಾ -1 ರವರಿಗೆ ಕಿರುಕುಳ ನೀಡಿದ್ದರಿಂದ ಅವರು ಮಕ್ಕಳೊಂದಿಗೆ ಹೊಸಪೇಟೆಗೆ ಬಂದಿದ್ದರು ಅಂದರೆ ಸರಿಯಲ್ಲ. ದಿಃ 25-06-2017 ರಂದು ಆರೋಪಿ ಚಾಸಾ -1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿ ತನ್ನ ಮನೆಗೆ ಬಾ ಎಂದು ಕೈಯಿಂದ ಬೆನ್ನಿಗೆ ಹೊಡೆದು ಗಲಾಟೆ ಮಾಡಿದ್ದ ಅಂದರೆ ಸರಿಯಲ್ಲ.

ದಿಃ 14-08-2017 ರಂದು ನಾನು ಒಣಿಯಲ್ಲಿ ಇದ್ದಾಗ ಚಾಸಾ -1 ರವರ ತವರು ಮನೆ ಹತ್ತಿರ ಆರೋಪಿ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ವರದಕ್ಷಿಣೆ ತರದಿದ್ದರೆ ಜೀವ ಸಹಿತ ಬಿಡುವುದಿಲ್ಲ ಎಂದು ಮತ್ತು ಮಕ್ಕಳನ್ನು ಅಪಹರಿಸುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ ಅಂದರೆ ಸರಿಯಲ್ಲ. ನಾನು ಈ ಬಗ್ಗೆ ದಿಃ 14-09-2017 ರಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿ ನೀಡಿಲ್ಲ ಎಂಬ ಹೇಳಿಕೆ ಭಾಗವನ್ನು ನಿಪಿಃ 21 ಎಂದು ಗುರುತಿಸಲಾಯಿತು. ನಿಪಿಃ 21 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**CC 1313/2018**

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್ ವಿ ಬಿ ವಕೀಲರಿಂದಃ** ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.